**ಓಎಸ್ ನಂಃ 31/2013 ಪಿ.ಡಬ್ಲ್ಯೂ- 1**

**ದಿನಾಂಕಃ 26.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

ಮುಂದುವರೆದ ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಟಿ.ಎನ್.ಎಸ್. ವಕೀಲರಿಂದಃ

ನೀವು ನ್ಯಾಯಾಲಯಕ್ಕೆ ಕೊಟ್ಟಿರುವ ದಾಖಲಾತಿಗಳನ್ನು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ತಿಳಿದುಕೊಂಡಿರುತ್ತೆನೆ. ದಾವಾ ಆಸ್ತಿ ಟ್ರಸ್ಟ್ ಗೆ ನೊಂದಣಿ ಆಗಿರುತ್ತದೆಯಾ ಎಂದರೆ ಇಲ್ಲ. ದಾವಾ ಆಸ್ತಿ ಭೂಪರಿವರ್ತನೆ ಆಗಿರುತ್ತದೆಯಾ ಎಂದರೆ ಇಲ್ಲ. ಭೂ ಪರವರ್ತನೆ ಆಗಿರುವುದಿಲ್ಲ ಟ್ರಸ್ಟ್ ನ ಹೆಸರಿನಲ್ಲಿ ನೋಂದಣಿ ಆಗಿಲ್ಲ ಖಾತೆ ಯನ್ನು ಪಂಚಾಯಿತಿ ಯಾವ ದಾಖಲೆ ಆಧಾರದ ಮೇಲೆ ಟ್ರಸ್ಟ್ ಹೆಸರಿನಲ್ಲಿ ಮಾಡಿಸಿರುತ್ತೀರಿ ಎಂದರೆ ನನ್ನ ತಂದೆ ಹೆಸರಿನಲ್ಲಿ ಇತ್ತು ಅವರೇ ಮಾಡಿಸಿರುತ್ತಾರೆ. ನಿಮ್ಮ ತಂದೆ ಹೆಸರಿನಲ್ಲಿ ಎಷ್ಟು ವಿಸ್ತೀರ್ಣ ಇತ್ತು ಎಂದರೆ 14 ಗುಂಟೆ ಇತ್ತು ಎನ್ನುತ್ತಾರೆ. ಉಳಿದ ವಿಸ್ತೀರ್ಣ ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ಮಂಗಮ್ಮನ ಹೆಸರಿನಲ್ಲಿ ಇರುತ್ತದೆ. ಮಂಗಮ್ಮನಿಂದ ಯಾರ ಹೆಸರಿಗೆ ಬಂದಿರುತ್ತದೆ ಶಾಮಣ್ಣನ ಹೆಸರಿಗೆ ಬಂದಿರುತ್ತದೆ. ಅಸಲು ದಾವಾ ಸಂ. 258/2008 ನಿಮ್ಮ ತಂದೆ ಹಾಕಿರುವ ದಾವೆ ಎಂದರೆ ಹೌದು. ಸದರಿ ಅಸಲು ದಾವಾ ಸಂ. 258/2008 ರ ವಾದ ಪತ್ರವನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1 ಓದಿ ತಿಳಿದುಕೊಂಡಿರುತ್ತೀರಾ ಅದರಲ್ಲಿರುವ ವಿಚಾರ ಸರಿ ಇರುತ್ತದೆಯಾ ಎಂದರೆ ಅದು ಸರಿ ಇಲ್ಲ ಅದನ್ನು ನಾನು ವಾಪಸ್ಸು ಪಡೆದುಕೊಂಡು ಬೇರೆ ದಾವೆ ಹಾಕಿರುತ್ತೆನೆ. ನಿಡಿ 1 ರಲ್ಲಿ ಏನು ವ್ಯತ್ಯಾಸ ಇರುತ್ತದೆ ಎಂದರೆ ಕರಾರು ಎಂದು ಇರುತ್ತದೆ. ಶಾಮಣ್ಣರವರು ಅಸಲು ದಾವಾ ಸಂ. 258/2008 ರಲ್ಲಿ ಯಾವ ತಕರಾರು ಹಾಕಿರುತ್ತಾರೆ ಎಂದು ಗೊತ್ತಾ ಎಂದರೆ ಜ್ಞಾಪಕ ಇಲ್ಲ. ನಿಮ್ಮ ತಂದೆ ಯಾವ ಕಾರಣಕ್ಕಾಗಿ ದಾವೆಯನ್ನು ವಾಪಸ್ಸು

ಪಡೆದಿರುತ್ತಾರೆ ಎಂದು ಕೇಳಿರುತ್ತೀರಾ ಎಂದರೆ ಸಾಕ್ಷಿ ಕೇೞಿರುತ್ತೆನೆ ಜ್ಞಾಪಕ ಇಲ್ಲ. ನೀವು ಜಿ ಪಿ ಎ ಮುಖಾಂತರ ಬಂದಾಗಿನಿಂದ ಶಾಮಣ್ಣರವರು ಏನು ತಕರಾರು ಹಾಕಿರುತ್ತಾರೆ ಎಂದು ಓದಿ ತಿಳಿದು ಕೊಂಡಿರುತ್ತೀರಾ ಎಂದರೆ ಇಲ್ಲ. ನಿಮ್ಮ ತಂದೆ ತಿದ್ದುಪಡಿ ಅರ್ಜಿಯನ್ನು ಸದರಿ ಅಸಲು ದಾವಾ ಸಂ. **258/2008** ರಲ್ಲಿ ಹಾಕಿರುತ್ತಾರೆ ಗೊತ್ತಾ ಎಂದರೆ ಗೊತ್ತಿಲ್ಲ. ಸದರಿ ಅರ್ಜಿ ಬಗ್ಗೆ ನಿಮ್ಮ ತಂದೆಯನ್ನು ಕೇಳಿ ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ. ಸದರಿ ಅರ್ಜಿಯ ಯಾವ ಆದೇಶ ಆಗಿರುತ್ತದೆ ಎಂದು ತಿಳಿದುಕೋಂಡಿರುತ್ತೀರಾ ಎಂದರೆ ಸಾಕ್ಷಿ ನಾನು ತಿಳಿದುಕೊಂಡಿರುವುದಿಲ್ಲ. ಸದರಿ ತಿದ್ದುಪಡಿ ಅರ್ಜಿಯ ವಿರುದ್ಧ ಡಬ್ಲೂ ಪಿ ನಿಮ್ಮ ತಂದೆ ಹಾಕಿರುವುದು ತಿಳಿದುಕೊಂಡಿರುತ್ತೀರಾ ಎಂದರೆ ನಮ್ಮ ತಂದೆ ಹಾಕಿಲ್ಲ. ಬಾಗೆಪಲ್ಲಿಯಲ್ಲಿ ಅಸಲು ದಾವಾ ಸಂ. **21/2015** ರ ವಿರುದ್ಧ ಆರ್ ಎ ನಂ. **93/2019** ಯಾರು ಹಾಕಿರುತ್ತಾರೆ ಎಂದರೆ ನಮ್ಮ ತಂದೆ ಹಾಕಿರುತ್ತಾರೆ. ಸದರಿ ಆದೇಶ ಏನು ಆಗಿರುತ್ತದೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ತಿಳಿದುಕೊಂಡಿರುತ್ತೆನೆ. ಆರ್ ಎ ನಂ. **93/2019** ರಲ್ಲಿ ಏನು ಆದೇಶ ಆಗಿರುತ್ತದೆ ಎಂದರೆ 7 ದಿನದಲ್ಲಿ ಹಾಜರಾಗಬೇಕಾಗಿ ಆದೇಶ ಇರುತ್ತದೆ ನಾನು ಯಾವಾಗ ಹಾಜರಾಗಿರುತ್ತೆನೆ ಎಂದು ನನಗೆ ಜ್ಞಾಪಕ ಇಲ್ಲ. ದಿಃ **09.10.2019** ರಲ್ಲಿ ನೀವು ಹಾಜರಾಗಿ ತಕರಾರು ಹಾಕಿಲ್ಲದಿದ್ದರೆ ಸದರಿ ತೀರ್ಪು ಊರ್ಜಿತ ಆಗುವುದಿಲ್ಲ ಎಂದು ಆದೇಶ ಆಗಿರುತ್ತದೆ ಎಂದರೆ ನಾನು ಹಾಜರಾಗಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ನ್ಯಾಯಾಲಯದಲ್ಲಿ ನಾನೇ ಹಾಜರಾಗುತ್ತಿದ್ದೆ ಜೊತೆಯಲ್ಲಿ ನನ್ನ ತಂದೆಯವರು ಬರುತ್ತಿದ್ದರು. ವಾದಿ ಸದರಿ ದಾವೆಯಲ್ಲಿ ವಾದಿ ಅದಂರೆ ಅಸಲುದಾವಾ ಸಂ. **21/2015** ರಲ್ಲಿ ವಾದಿ ಆಗಿದ್ದರು ಎಂದರೆ ಹೌದು. ಸದರಿ ದಾವೆ **21/2015** ರಲ್ಲಿ **28** ಗುಂಟೆ ಶ್ರೀನಾಥರವರ ಭಾಗಕ್ಕೆ

ಬಂದಿರುತ್ತದೆ ಎಂದರೆ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿರುವಾಗಲೇ ಅವರು ಮಾಡಿಕೊಂಡಿರುತ್ತಾರೆ. ಸದರಿ ದಾವೆಯಲ್ಲಿ **03.12.2019** ರಲ್ಲಿ ಹಾಜರಾಗಿರುತ್ತೀರಿ ಎಂದರೆ ನನಗೆ ಜ್ಞಾಪಕ ಇಲ್ಲ. ವಾದಿ ಪ್ರಸುತ ದಾವೆಯಲ್ಲೂ ಇರುತ್ತಾರೆ ಎಂದರೆ ಹೌದು. ಅವರು ತೀರಿಕೊಂಡಿರುತ್ತಾರೆ ಎಂದರೆ ಹೌದು. ಶ್ರೀನಾಥರವರು **19.08.2020** ಮರಣ ಹೊಂದಿರುತ್ತಾರೆ ಎಂದು ಅರ್ಜಿ ಸಲ್ಲಿಸಿರುತ್ತೀರಿ ಎಂದರೆ ನನಗೆ ಜ್ಞಾಪಕ ಇಲ್ಲ. ದಿಃ **18.12.2020** ರಲ್ಲಿ ದಾವೆಯಾ ವಾದಿ ಗೈರು ಹಾಜರಾದ ಕಾರಣ ವಜಾ ಆಗಿರುತ್ತದೆ. ಅವರು ತೀರಿಹೋದ ದಿನಾಂಕವನ್ನು ಮರೆ ಮಾಚಿ ಸದರಿ ದಾವೆಯನ್ನು ವಜಾ ಮಾಡಿಸಿರುತ್ತೀರಿ ಎಂದರೆ ಸರಿಯಲ್ಲ. ಅದರಲ್ಲಿ ನೀವು ಹಾಗೂ ಪ್ರತಿವಾದಿಗಳು ಸೇರಿ ಶಾಮಿಲಾಗಿ ವಜಾ ಮಾಡಿಸಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ತಂದೆ ಚಿಕ್ಕಬಳ್ಳಾಪುರಕ್ಕೆ ಹಾಗೂ ಬಾಗೆಪಲ್ಲಿ ಇರುವ ದಾವೆಗೆ ಹಾಜರಾಗುತ್ತಿದ್ದರು ಎಂದರೆ ಹೌದು. ಚಿಂತಾಮಣಿಯಿಂದ ಬಾಗೆಪಲ್ಲಿ ಗೆ ಎಷ್ಟು ಅಂತರ ಎಂದರೆ **50** ಕಿ ಮಿ. ಚಿಂತಾಮಣಿಯಿಂದ ಚಿಕ್ಕಬಳ್ಳಾಪುರಕ್ಕೆ ಎಷ್ಟು ಅಂತರ ಎಂದರೆ **30** ಕಿ ಮಿ. ನಿಮ್ಮ ಮನೆಯಿಂದ ನ್ಯಾಯಾಲಯಕ್ಕೆ ಎಷ್ಟು ದೂರ ಎಂದರೆ **2** ಕಿ ಮಿ ಇರುತ್ತದೆ. ನಿಮ್ಮ ತಂದೆ ಚೆನ್ನಾಗಿ ಇದ್ದಾರೆ ಅವರು ಸತ್ಯಾಂಶ ಗೊತ್ತಾಗುತ್ತದೆ ಎಂದು ಅವರು ಚೆನ್ನಾಗಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿ ದುರಸ್ತಿ ಆಗಿರುತ್ತದೆ ಎಂದರೆ **2020** ರವರಗೆ ಆಗಿರುವುದಿಲ್ಲ ನಂತರ ಆಗಿರುತ್ತದೆ. ನಿಮ್ಮ **14** ಗುಂಟೆ ಆಸ್ತಿ **24/4** ರಲ್ಲಿ ಸ.ನಂ. ನಲ್ಲಿ ಇರುತ್ತದ ಎಂದರೆ ಹೌದು. **28** ಗುಂಟೆ ಮತ್ತು **1** ಗುಂಟೆ ಕರಾಬು ಒಟ್ಟು **29** ಗುಂಟೆ **24/8** ಎಂದು ದುರಸ್ತಿ ಅಗಿರುತ್ತದೆ ಎಂದರೆ ನ್ಯಾಯಾಲಯದಲ್ಲಿ ದಾವೆಗಳು ಚಾಲ್ತಿಯಲ್ಲಿ ಇದ್ದರು ಉಚ್ಚ ನ್ಯಾಯಾಲಯಲ್ಲಿ ಮಾಡಿಸಿಕೊಂಡಿರುತ್ತಾರೆ. ಸ.ನಂ. **24/8** ಶ್ರೀನಾಥರವರ ಹೆಸರಿಗೆ

ದುರಸ್ತಿ ಅಗಿ ಶ್ರೀನಾಥ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ದೌರ್ಜನ್ಯ ವಾಗಿ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ನಿಮ್ಮ **24/4 14** ಗುಂಟೆ ಆಸ್ತಿ **24/8 28** ಗುಂಟೆಯ ದಕ್ಷಿಣಕೆ ಬರುತ್ತದೆ ಎಂದರೆ ಅವರು ಮಾಡಿಸಿಕೂಂಡಿರುತ್ತಾರೆ ಎನ್ನುತ್ತಾರೆ. ದುರಸ್ತಿ ಮಾಡಲು ಬಂದಾಗ ನೀವು ತಕರಾರು ಮಾಡಿ ಪೊಲೀಸ್ ರವರು ಬಂದಿರುತ್ತಾರೆ ಎಂದರೆ ಸಾಕ್ಷಿ ಸರಿಯಲ್ಲ. **28** ಗುಂಟೆ ಆಸ್ತಿಯೂ ಶ್ರೀನಾಥರವರು ತೀರಿಕೊಂಡ ನಂತರ ಸಾಯಿ ಲಕ್ಷ್ಮಿ ರವರಿಗೆ ಹೆಸರಿಗೆ ಖಾತೆ ಆಗಿರುತ್ತದ ಎಂದರೆ ಸರಿಯಲ್ಲ. ದುರಸ್ತಿ ಆಗಿರುವುದು ಯಾವಾಗ ಗೊತ್ತಾಗಿರುತ್ತದೆ ಎಂದರೆ **1** ತಿಂಗಳು ಆಗಿರುತ್ತದೆ. ದುರಸ್ತಿ ಆದ ಬಗ್ಗೆ ಮೇಲ್ಮನವಿ ಸಲ್ಲಿಸಿರುತ್ತೀರಾ ಎಂದರೆ ಸಲ್ಲಿಸಿರುತ್ತೇನೆ. ದುರಸ್ತಿ ಬಗ್ಗೆ ಎಲ್ಲಿಯುೂ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ದೌರ್ಜನ್ಯದಿಂದ ಮಾಡಿಕೊಂಡಿರುತ್ತಾರೆ. ಸಾಯಿ ಲಕ್ಷ್ಮಿ ಗಂಡ ತೀರಿಕೂಂಡಿರುತ್ತಾರೆ ಅವರಿಗೆ ಯಾರು ಇಲ್ಲ ಎಂದು ಅವರ ಆಸ್ತಿ ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ಸದರಿ ಸಾಯಿ ಲಕ್ಷ್ಮೀ ಪುಟ್ಟಪರ್ತಿಯಲ್ಲಿ ಇರುತ್ತಾರೆ ಎಂದರೆ ಗೊತ್ತಿಲ್ಲ. ಅವರು ದೂರ ಇರುವುದನ್ನು ದುರಪಯೋಗ ಮಾಡಿಕೊಂಡು ತೊಂದರೆ ಕೊಡುತ್ತೀದ್ದಿರಿ ಎಂದರೆ ಸರಿಯಲ್ಲ. ಪ್ರತಿವಾದಿಗಳು ಏನು ತಕರಾರು ಹಾಕಿರುತ್ತಾರೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ತಿಳಿದುಕೊಂಡಿಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮ್ಡಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.